ದಿನಾಂಕ **27-02-2024** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎನ್.ಕೆ.ಡಿ. ಪ್ರತಿವಾದಿ ಪರ ವಕೀಲರಿಂದಃ-**

1. ಎರಡು ಕರಾರು ಪತ್ರ ಬರೆದುಕೊಟ್ಟಿರುವುದು ನನಗೆ ಗೊತ್ತಿಲ್ಲ ಆದರೆ ಒಂದು ಕರಾರು ಪತ್ರ ಬರೆದುಕೊಟ್ಟಿರುವುದು ಮಾತ್ರ ನನಗೆ ಗೊತ್ತು, ಇನ್ನೊಂದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

2. ನಿಪಿ 1 ರ ವಿಚಾರವಾಗಿ ಪ್ರತಿವಾದಿಗಳ ಪ್ರ ಪ್ರಥಮ ಬಾರಿ ಯಾವಾಗ ಭೇಟಿ ಆಗಿದ್ದು ಎಂದರೆ ಸಾಕ್ಷಿಯು ಆಗಸ್ಟ್ ಮೊದಲನೇ ವಾರ 2002 ಎನ್ನುತ್ತಾರೆ. 2002 ರಲ್ಲಿ ನಾನು ಕಾಲೇಜು ವಿಧ್ಯಾರ್ಥಿ ಆಗಿದ್ದೆ. 2002 ರಲ್ಲಿ ನಿಮಗೆ 14 ವರ್ಷ ವಯಸ್ಸು ಎಂದರೆ ಸಾಕ್ಷಿಯು 17 ವರ್ಷ ತುಂಬಿ 18 ವರ್ಷ ಇತ್ತು ಎನ್ನುತ್ತಾರೆ.

3. ಎ.ಕೆ. ಹನುಮಕ್ಕ ರವರ ತವರು ಮನೆ ಯಾವ ಊರು ಎಂಬುದು ನನಗೆ ಗೊತ್ತಿಲ್ಲ.

4. ಪ್ರತಿವಾದಿಗಳ ವಾಸ ಕೊಂಗನಹಳ್ಳಿ ಗ್ರಾಮ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳನ್ನು ಭೇಟಿ ಮಾಡಲು ವೈಯಕ್ತಿಕವಾಗಿ ಕೊಂಗನಹಳ್ಳಿಗೆ ಹೋಗಿಲ್ಲ ಆದರೆ ಅಲ್ಲಿ ನನ್ನ ಸಬಂಧಿಕರು ಅಲ್ಲಿ ಇದ್ದರು, ಆ ವಿಚಾರವಾಗಿ ಹೋಗಿದ್ದೆ ಎನ್ನುತ್ತಾರೆ.

5. ದಿಃ 21-08-2002 ಕ್ಕೂ ಮೊದಲು ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ನೋಡಿದ್ದೆ. ಆ ಕಾಲಕ್ಕೆ ದಾಖಲಾತಿಗಳನ್ನು ನನ್ನ ಮೂಲ ನನ್ನ ತಂದೆ ನೋಡಿದ್ದರು. ಅವು ಯಾವ ದಾಖಲಾತಿಗಳು ಎಂದರೆ ಸಾಕ್ಷಿಯು ಸಾಗುವಳಿ ಚೀಟಿ, ಹನುಮಕ್ಕ

ಕೋಂ ಬುಚ್ಚಪ್ಪ ರವರಿಗೆ ಸಂಬಂಧಿಸಿದ ದಾಖಲಾತಿಗಳು ಮತ್ತು ಅಜ್ಜಪ್ಪ ರವರಿಂದ ವಿಲ್ ಮುಖಾಂತರ ಬಂದ ದಾಖಲಾತಿಗಳನ್ನು ನೋಡಿದ್ದೆ ಎನ್ನುತ್ತಾರೆ.

6. 3 ನೇ ಪ್ರತಿವಾದಿ ದೊಡ್ಡಬಳ್ಳಾಪುರದ ಕೋನಘಟ್ಟ ಗ್ರಾಮ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಗೆ ನೋಟೀಸು ಕಳುಹಿಸಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ಹೇಳಿದ್ದೆ, ಅವರಿಗೆ ಗೊತ್ತು ಎನ್ನುತ್ತಾರೆ. ನೋಟೀಸನ್ನು ನೀವು ಉಲ್ಲಪ್ಪನಹಳ್ಳಿ ಮಜರ ಕೊಂಗಾನಹಳ್ಳಿ ಗ್ರಾಮಕ್ಕೆ ನೋಟೀಸು ಕೊಟ್ಟಿದ್ದು ಎಂದರೆ ಸಾಕ್ಷಿಯು ನನ್ನ ತಂದೆ ತಪ್ಪು ವಿಳಾಸಕ್ಕೆ ಕಳುಹಿಸಿದ್ದರು ಎನ್ನುತ್ತಾರೆ. ಇದೆ ವಿಳಾಸಕ್ಕೆ ನೀವು ಅವರಿಗೆ ನೋಟೀಸನ್ನು ಕಳುಹಿಸಿದ್ದು ಎಂದರೆ ಸಾಕ್ಷಿಯು ಮೊದಲು ಆ ರೀತಿ ತಪ್ಪಾಗಿತ್ತು, ಅದನ್ನು ನಮ್ಮ ವಕೀಲರಿಗೆ ಹೇಳಿರುತ್ತೇನೆ ಎನ್ನುತ್ತಾರೆ.

7. ದಿಃ 21-08-2002 ರಲ್ಲಿ ತಾಲ್ಲೂಕು ಕಚೇರಿಯ ಹತ್ತಿರ ಮಾತುಕತೆ ಆಗಿತ್ತು. ಆ ಕಾಲಕ್ಕೆ ಯಾರು ಬಂದಿದ್ದರು ಎಂದರೆ ಸಾಕ್ಷಿಯು ಅಜ್ಜಪ್ಪ, ನಾರಾಯಣಸ್ವಾಮಿ ಬಂದಿದ್ದರು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನಾರಾಯಣಸ್ವಾಮಿ ಬಂದಿದ್ದರು ಎಂದು ನನಗೆ ನನ್ನ ತಂದೆ ತೋರಿಸಿ ಹೇಳಿದ್ದರು ಎನ್ನುತ್ತಾರೆ. ಅವರಿಬ್ಬರನ್ನು ಬಿಟ್ಟು ಶ್ರೀರಾಮ, ಮುನಿವೆಂಕಟಪ್ಪ, ನಾರಾಯಣಸ್ವಾಮಿ ಮತ್ತು ನಮ್ಮ ಕಾಲೇಜಿ ನವರು ಇದ್ದರು ಎನ್ನುತ್ತಾರೆ . ಇವರನ್ನು ನಾವು ಮತ್ತು ಪ್ರತಿವಾದಿಗಳ ಕಡೆಯವರು ಕರೆದಿದ್ದರು.

8. ದಿಃ 21-08-2002 ರಲ್ಲಿ ಪ್ರತಿವಾದಿಗಳಿಗೆ ಅರ್ಥಿಕ ತೊಂದರೆ ಇತ್ತು ಎಂದರೆ ಸಾಕ್ಷಿಯು ನಾರಾಯಣಸ್ವಾಮಿ ರವರ ಮಗನಿಗೆ ಮದುವೆ ಮಾಡಬೇಕು, ಅವರಿಗೆ ಹಣ ಬೇಕು ಎಂಬ ಕಾರಣದಿಂದ ನಮ್ಮ ಮನೆಗೆ ಬಂದಿದ್ದರು ಎನ್ನುತ್ತಾರೆ. ಈ ಬಗ್ಗೆ ವೈಯಕ್ತಿಕ ವಿಚಾರಣೆ

ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಮಾಡಿಲ್ಲ, ನನ್ನ ತಂದೆ ಮಾಡಿದ್ದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

9. ನಿಪಿ 1 ನ್ನು ಬಟ್ಟಾಚಾರಿ ರವರು ತಯಾರಿಸಿದ್ದರು, ಅವರ ಪೂರ್ತಿ ಹೆಸರು ನನಗೆ ನೆನಪಿಲ್ಲ. ನಿಪಿ 1 ನ್ನು 21-08-2002 ರಂದು ತಯಾರಿಸಿದ್ದರು. ಈ ಪತ್ರವನ್ನು ತಯಾರಿಸಲು ಛಾಪಾ ಕಾಗದವನ್ನು ಯಾರು ತಂದಿದ್ದರು ಎಂಬುದು ನನಗೆ ಗೊತ್ತಿಲ್ಲ. ನಿಪಿ 1 ನ್ನು ಯಾರು ಯಾರಿಗೆ ಕೊಟ್ಟರು ಎಂದರೆ ಸಾಕ್ಷಿಯು ಪತ್ರ ತಯಾರು ಆದ ಮೇಲೆ ನಾನು ಅಲ್ಲಿಗೆ ಬಂದಿದ್ದು ಆದ್ದರಿಂದ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಯಾವ ದಿನಾಂಕದಂದು ಕ್ರಯಕ್ಕೆ ಪಡೆದಿದ್ದು ಎಂದರೆ ಸಾಕ್ಷಿಯು ನನಗೆ ಗೊತ್ತಿರುವ ಪ್ರಕಾರ ಅದೇ ದಿನ ಎನ್ನುತ್ತಾರೆ. ಆ ಛಾಪಾ ಕಾಗದದ ಮುಖಬೆಲೆ ಎಷ್ಟು ಎಂಬುದು ನನಗೆ ಗೊತ್ತಿಲ್ಲ. ಯಾರು ಯಾರಿಗೆ ಈ ಪತ್ರವನ್ನು ಬರೆಯಲು ಮಾಹಿತಿ ಕೊಟ್ಟಿದ್ದು ಎಂಬುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಹೌದು ಗೊತ್ತಿಲ್ಲ ಎನ್ನುತ್ತಾರೆ. ನಿಪಿ 1 ರಲ್ಲಿ ಈ ತಾರೀಖಿನಿಂದ 08 ವರ್ಷಗಳ ನಂತರ ಅಂದರೆ ದಿಃ 21-10-2008 ನೇ ಸಾಲಿಗೆ ಅಂತಾ ಬರೆದಿರುತ್ತದೆ ಎಂದರೆ ಸರಿ. ಅಂದರೆ ಸಮಯ ದಿಃ 20-10-2011 ಕ್ಕೆ ಮುಗಿದಿರುತ್ತದೆ ಎಂದರೆ ಸರಿ.

10. ಆ ದಿನ ಯಾರಾದರೂ ದಾವಾ ಆಸ್ತಿಯ ದಾಖಲಾತಿಗಳನ್ನು ತೆಗೆದುಕೊಂಡು ಬಂದಿದ್ದರಾ ಎಂದರೆ ಸಸಾಕ್ಷಿಯು ನಾನು ನೋಡಿಲ್ಲ ಎನ್ನುತ್ತಾರೆ. ಆ ಪತ್ರ ಎಲ್ಲಿ ತಾಯಾರಾಗಿತ್ತು ಎಂಬ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಾನು ಬರುವಷ್ಟರಲ್ಲಿ ಅಜ್ಜಪ್ಪ, ನಾರಾಯಣಸ್ವಾಮಿ ಇದ್ದರು ನಂತರ ನಾರಾಯಣಪ್ಪ , ಶ್ರೀರಾಮ, ಮುನಿವೆಂಕಟಪ್ಪ ಮತ್ತು ನನ್ನ ಸ್ನೇಹಿತರು ಬಂದಿದ್ದರು ಎನ್ನುತ್ತಾರೆ. ನಂತರ ನಾನು ಪತ್ರ ಓದಿದೆ, ನನ್ನ ತಂದೆ ಅವರಿಗೆ ಹಣ ಕೊಟ್ಟರು, ಸಹಿ ಮಾಡಿದ್ದರು

ಎನ್ನುತ್ತಾರೆ. ಸಹಿಗಳನ್ನು ತಾಲ್ಲೂಕು ಕಚೇರಿಯ ಆವರಣದಲ್ಲಿ ಸಹಿ ಮಾಡಿದ್ದರು. ಎಲ್ಲಿ ಎಂದರೆ ಅಂಬೇಡ್ಕರ್ ಭವನದ ಪಕ್ಕ ಎನ್ನುತ್ತಾರೆ. ಆವರಣ ಎಂದರೆ ಎಲ್ಲಿ ಎಂದರೆ ಸಾಕ್ಷಿಯು Entrance ಹತ್ತಿರ ಎನ್ನುತ್ತಾರೆ.

11. ಮೊದಲು ಯಾರು ಸಹಿ ಮಾಡಿದ್ದರು ಎಂಬುದು ನನಗೆ ನೆನಪಿಲ್ಲ. ಯಾರು ಮೊದಲು ಸಹಿ ಮಾಡಿದರು ಎಂಬುದನ್ನು ನಾನು ಖುದ್ದಾಗಿ ಗಮನಿಸಿಲ್ಲ ಎನ್ನುತ್ತಾರೆ. ವೈಯಕ್ತಿಕವಾಗಿ ಯಾರು ಮೊದಲು ಮತ್ತು ಯಾರು ನಂತರ ಸಹಿ ಮಾಡಿದ್ದರು ಎಂಬುದನ್ನು ನಾನು ಹೇಳಲಾರೆ ಎನ್ನುತ್ತಾರೆ. ಅಲ್ಲಿದ್ದ ಮೊದಲ ವ್ಯಕ್ತಿ , 2 ನೇ ವ್ಯಕ್ತಿ ಮತ್ತು 3 ನೇ ವ್ಯಕ್ತಿ ಎಲ್ಲಿದ್ದರು ಎಂಬುದನ್ನು ನಾನು ಹೇಳಲಾರೆ. ಮೊದಲ ವ್ಯಕ್ತಿ ಸಹಿ ಮಾಡಿದ ಸಹಿಯನ್ನು 2 ಮತ್ತು 3 ನೇ ವ್ಯಕ್ತಿಗಳು ನೋಡಿದ್ದರಾ, 2 ನೇ ವ್ಯಕ್ತಿ ಸಹಿ ಮಾಡಿದ ಸಹಿಯನ್ನು 1 ಮತ್ತು 3 ನೇ ವ್ಯಕ್ತಿಗಳು ನೋಡಿದ್ದರಾ, 3 ನೇ ವ್ಯಕ್ತಿ ಸಹಿ ಮಾಡಿದ ಸಹಿಯನ್ನು 1 ಮತ್ತು 2 ನೇ ವ್ಯಕ್ತಿಗಳು ನೋಡಿದ್ದರಾ ಎಂಬುದು ನನಗೆ ಗೊತ್ತಿಲ್ಲ.

12. ನಂತರ ಏನಾಯಿತು ಎಂದರೆ ಸಾಕ್ಷಿಯು ಪತ್ರವನ್ನು ಪಡೆದು ನಾವು ಊರಿಗೆ ಬಂದೆವು ನಂತರ ಉಳಿದ ಹಣ ಕೊಡುತ್ತೇವೆ ಎಂದು ಹೇಳಿದ್ದೇವು ಎನ್ನುತ್ತಾರೆ.

13. ರಂಗ ಭಟ್ಟಾಚಾರ್ಯ ರವರ ಪಾತ್ರ ಏನು ಎಂಬುದು ನನಗೆ ಗೊತ್ತಿಲ್ಲ. ನಿಮಗಿಂತ ನಿಮ್ಮ ತಂದೆಗೆಅದರ ಬಗ್ಗೆ ಮಾಹಿತಿ ಇದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

14. 2002 ರ ಕಾಲಕ್ಕೆ ನನ್ನ ತಂದೆ ಆರೋಗ್ಯವಾಗಿದ್ದರು ಎಂದರೆ ಸರಿ. ನಿಮಗಿಂತ ನಿಮ್ಮ ತಂದೆಗೆ ಎಲ್ಲಾ ಗೊತ್ತು ಎಂದರೆ ಸಾಕ್ಷಿಯು ಎಲ್ಲವನ್ನು ನಿರ್ಧಾರ ಮಾಡಲು ಆಗುವುದಿಲ್ಲ, ವಯಸ್ಸಿನ ಮೇಲೆ ಅವಲಂಭಿತ ಆಗಿರುತ್ತದೆ ಎನ್ನುತ್ತಾರೆ.

15. ನಿಗದಿ ಮಾಡಿದ ಅವಧಿಯಲ್ಲಿ ಮಾತುಕತೆ ಆಗಿತ್ತು. ನಿಪಿ 1 ನ್ನು ಯಾರಾದರೂ ಓದಿ ಹೇಳಿದ್ದರ ಬಗ್ಗೆ ನನಗೆ ಗೊತ್ತಿಲ್ಲ.

16. 2002 ರಲ್ಲಿ ನಮ್ಮದು ಬಿ ಪಿ ಎಲಿ ಕಾರ್ಡ್ ಇತ್ತು. ನಿಮ್ಮ ತಂದೆಯದ್ದು ಬ್ಯಾಂಕ್ ನಲ್ಲಿ ಖಾತೆ ಇದೆಯೇ ಎಂದರೆ ಸಾಕ್ಷಿಯು ಆಗ ಇರಲಿಲ್ಲ, ಈಗ ಇದೆ ಎನ್ನುತ್ತಾರೆ. ನನ್ನ ತಂದೆಯ ಖಾತೆಯಲ್ಲಿ ಈಗ 10-30 ಸಾವಿರ ಹಣ ಇರಬಹುದು. ಖುದ್ದಾಗಿ ನೋಡಿಲ್ಲ ಎಂದರೆ ಸರಿ.

17. ಆ ಕಾಲಕ್ಕೆ ನಿಮ್ಮ ತಂದೆಯ ಹತ್ತಿರ 60 ಸಾವಿರ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನು ಇವೆಯೇ ಎಂದರೆ ಸಾಕ್ಷಿಯು ದಾಖಲಾತಿಗಳ ಇದ್ದ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಹಣ ಹೇಗೆ ಬಂತು ಎಂಬುದರ ಬಗ್ಗೆ ಹೇಳಬಲ್ಲೆ ಎನ್ನುತ್ತಾರೆ.

18. ಉಳಿದ 80 ಸಾವಿರ ಹಣವನ್ನು ನ್ಯಾಯಾಲಯದಲ್ಲಿ ಕಟ್ಟಿರುತ್ತೀರಾ ಎಂದರೆ ಸಾಕ್ಷಿಯು 60 ಸಾವಿರ ಪೆನಾಲ್ಟಿನ್ನು ಕಟ್ಟಿರುತ್ತೇವೆ ಎನ್ನುತ್ತಾರೆ.

19. ಪ್ರತಿವಾದಿಗಳು ನೀಡಿದ ಪ್ರತ್ಯುತ್ತರದ ನೋಟೀಸಿನ ಬಗ್ಗೆ ನನಗೆ ಗೊತ್ತಿಲ್ಲ.

20. ಈ ಪ್ರಕರಣ ಹೂಡುವುದಕ್ಕಿಂತ ಮುಂಚೆ ನೀವು ಪ್ರತಿವಾದಿಗಳನ್ನು ಭೇಟಿ ಆಗಿದ್ದಿರಾ ಎಂದರೆ ಸಾಕ್ಷಿಯು ವೈಯಕ್ತಿಕವಾಗಿ ಭೇಟಿ ಆಗಿಲ್ಲ ಆದರೆ ಮಧ್ಯಸ್ಥಿಕೆಗಾರರ ಮುಖಾಂತರ ಭೇಟಿ ಆಗಿದ್ದೇವು ಎನ್ನುತ್ತಾರೆ. ಈ ವಿಷಯವನ್ನು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೀರಾ ಎಂದರೆ

ಸಾಕ್ಷಿಯು ಆ ರೀತಿ ಹೇಳಿಲ್ಲ ಆದರೆ ಭೇಟಿ ಮಾಡಲು ಪ್ರಯತ್ನಿಸಿದ್ದೇವು ಅಂತಾ ಬರೆದಿದ್ದೇವು ಎನ್ನುತ್ತಾರೆ.

21. ಪ್ರತಿವಾದಿಗಳಿಗೆ ದಾವಾ ಸ್ವತ್ತು ಮತ್ತು ಅದರ ಪಕ್ಕದಲ್ಲಿರುವ ಸರ್ವೆ ನಂ.81/ಪಿ14 ಬಿಟ್ಟರೆ ಬೇರೆ ಆಸ್ತಿಗಳು ಇಲ್ಲ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ.

22. ಅಜ್ಜಪ್ಪ ನನ್ನ ದೂರದ ಸಂಬಂಧಿ. ನಿಪಿ 1 ರಲ್ಲಿ ತಮ್ಮನಾಗಿರುವುದರಿಂದ ಎಂದು ಬರೆದಿರುವುದು ನಿಜ. ನಿಪಿ 1 ರಲ್ಲಿ ಅಜ್ಜಪ್ಪ ಆದ ನಾನು ನ್ಯಾಯಾಲಯದಲ್ಲಿ ಜನರಲ್ ಪವರ್ ಆಫ್ ಅಟಾರ್ನಿಯನ್ನ ಸಹ ಮಾಡಿಸಿಕೊಟ್ಟಿರುತ್ತೇನೆ ಅಂತಾ ಬರೆದಿರುತ್ತದೆ ಎಂದರೆ ಸರಿ. ಏಕೆ ಈ ರೀತಿ ಬರೆದಿದ್ದು ಎಂಬುದು ನನಗೆ ಗೊತ್ತಿಲ್ಲ. ಆ ಪತ್ರ ನ್ಯಾಯಾಲಯಕ್ಕೆ ಕೊಟ್ಟಿಲ್ಲ , ನನ್ನ ಹತ್ತಿರ ಅದರ ಪ್ರತಿ ಇದೆ ಎನ್ನುತ್ತಾರೆ. ಅದರ ಮೂಲ ಪ್ರತಿ ಎಲ್ಲಿದೆ ಎಂಬುದು ನನಗೆ ಗೊತ್ತಿಲ್ಲ.

23. ನಿಪಿ 1 ರಂತೆ 21-08-2002 ರಲ್ಲಿ ಕರಗಪ್ಪ ರವರು ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. 2002 ರ ಕಾಲಕ್ಕೆ ಕರಗಪ್ಪ ರವರು ಬದುಕಿದ್ದರು. ಅವರು ಯಾವಾಗ ಮರಣ ಹೊಂದಿದರು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ 1 ರ ಕಾಲಕ್ಕೆ ಕರಗಪ್ಪ ರವರು ಮರಣ ಹೊಂದಿದ್ದರು ಎಂದರೆ ಸರಿಯಲ್ಲ.

24. ಪ್ರತಿವಾದಿಗಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಅವರು ಜನರಲ್ ಪವರ್ ಆಫ್ ಅಟಾರ್ನಿಯನ್ನು ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕರಗಪ್ಪ ರವರು ಚಿಕ್ಕಂದಿನಿಂದಲೂ ಅವರ ಅತ್ತೆಯ ಊರಿನಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ.

25. ದಾವಾ ಸ್ವತ್ತಿನ ಸ್ವಾಧೀನದಲ್ಲಿ ಪ್ರತಿವಾದಿಗಳು ಮತ್ತು ಅಮರಾವತಿ ಇದ್ದಾರೆ ಎಂದರೆ ಸರಿಯಲ್ಲ. ಪ್ರತಿವರ್ಷ ಅವರೇ ಬೆಳೆಯನ್ನು ಹೂಡುತ್ತಿದ್ದಾರೆ ಎಂದರೆ ಸಾಕ್ಷಿಯು 20 ವರ್ಷಗಳಿಂದ ನಾವೇ ಸ್ವಾಧೀನದಲ್ಲಿದ್ದೇವೆ ಮತ್ತು ಹುರುಳಿ ಹಾಗೂ ಇನ್ನಿತರೇ ಬೆಳೆಗಳನ್ನು ಬೆಳೆಯುತ್ತಿದ್ದೇವೆ ಎನ್ನುತ್ತಾರೆ. ನೀವು ಸ್ವಾಧೀನದಲ್ಲಿರುವ ಬಗ್ಗೆ ಏನು ದಾಖಲೆ ಇದೆ ಎಂದರೆ ಸಾಕ್ಷಿಯು ತಾಲ್ಲೂಕು ಕಚೇರಿಯಿಂದ ಒಂದು ದಾಖಲಾತಿ ಪಡೆದುಕೊಂಡಿರುತ್ತೇವೆ ಎನ್ನುತ್ತಾರೆ. ಏನು ಆ ದಾಖಲೆ ಎಂದರೆ ಸಾಕ್ಷಿಯು ಸ್ವಾಧೀನ ಪತ್ರ ಎನ್ನುತ್ತಾರೆ . ಅದನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಕೊಡಲು ಏನು ತೊಂದರೆ ಎಂದರೆ ಸಾಕ್ಷಿಯು ಕೊಡುತ್ತೇನೆ ಎನ್ನುತ್ತಾರೆ. ನೀವು ಆ ದಾಖಲೆ ಪಡೆದಿಲ್ಲ ಎಂದರೆ ಸರಿಯಲ್ಲ.

26. ಪ್ರತಿವಾದಿಗಳ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ನಿಪಿ.1 ನ್ನು ಸೃಷ್ಟಿಸಿ .ುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಮ್ಮ ತಂದೆ ನ್ಯಾಯಾಲಯಕ್ಕೆ ಬಂದರೆ ನಿಜ ಗೊತ್ತಾಗುತ್ತದೆ ಎಂದು ನಾನು ಜನರಲ್ ಪವರ್ ಆಫ್ ಅಟಾರ್ನಿಯನ್ನು ಪಡೆದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಆರೋಗ್ಯ ಸರಿಯಿಲ್ಲ ಎನ್ನುತ್ತಾರೆ . ನಿಪಿ 1 ಕ್ಕೆ ಅಜ್ಜಪ್ಪ ರವರ ಹೆಬ್ಬೆಟ್ಟಿನ ಗುರುತು ಮತುತ ಇನ್ನಿತರರ ಸಹಿಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

27. ದಾವಾ ಆಸ್ತಿಯುನ್ನು 15 ವರ್ಷ ಪರಭಾರೆ ಮಾಡಬಾರದು ಅಂತಾ ಅವರಿಗೆ ಜಮೀನು ಮಂಜೂರು ಆಗಿತ್ತು ಎಂದರೆ ಸರಿ. ಆದ್ದರಿಂದ ಅವರಿಗೆ ಆಸ್ತಿ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

28. ಅಜ್ಜಪ್ಪನಿಗೆ ತುಂಬಾ ವಯಸ್ಸಾಗಿದೆ, ಅಮರಾವತಿ ಅಂಗವಿಕಲಳು ಮತ್ತು ನಾರಾಯಣಸ್ವಾಮಿ ಕೆಟ್ಟ ಚಟಗಳಿಂದ ಊರಲ್ಲಿ ಇದ್ದಾನೆ ಆದ್ದರಿಂದ ಅವರ ಆಸ್ತಿ ಕಬಳಿಸುವ ಉದ್ದೇಶದಿಂದ ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.